ಓಟಿಳಿ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕಳೆದ ೫ ವರ್ಷಗಳಲ್ಲಿ ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನೀರಿಗಾಗಿ ಪ್ರತಿ ವರ್ಷ ಖರ್ಚು ಮಾಡಿದ ಹಣವೆಷ್ಟು ? (ಸಾಲುವಾರು ವಿವರ ನೀಡುವುದು)

ಆ) ಕಾರ್ಖಾನೆ ವಾಹನಗಳಿಂದ ನೀರು ತರಲು ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಬಾಡಿಗೆ ವಾಹನಗಳಿಂದ ನೀರನ್ನು ಒದಗಿಸುವ ಸಲುವಾಗಿ ಎಷ್ಟು ಖರ್ಚು ಮಾಡಲಾಗಿದೆ?

(೧) ಕಾರ್ಖಾನೆಯ ವಾಹನಗಳಿಂದ (೨) ಬಾಡಿಗೆ ವಾಹನಗಳಿಂದ)

---

ಇ) ೧೯೮೮ರ ಅಕ್ಟೋಬರ್ ತಿಂಗಳಿನಿಂದ ಇಲ್ಲಿಯವರೆಗೆ ಕಾರ್ಖಾನೆ ನಡೆಸಲು ನೀರಿಗಾಗಿ ಪ್ರತಿ ದಿವಸ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಈ) ಕಾರ್ಖಾನೆಯ ಸ್ವಂತ ಟ್ರಕ್ಕುಗಳು ಎಷ್ಟು ಇವೆ ? ನೀರಿಗಾಗಿ ಎಲ್ಲವೂ ಇರುವುದೋ ಹೇಗೆ ? ವಿವರಣೆ ನೀಡುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಪ್ರತಿ ವರ್ಷ ಖರ್ಚು ಮಾಡಿದ ಹಣದ ವಿವರ ಈ ಕೆಳಕಂಡಂತೆ ಇದೆ.

| ೧೯೮೩-೮೪ | ೧೯೮೪-೮೫ | ೧೯೮೫-೮೬ | ೧೯೮೬-೮೭ | ೧೯೮೭-೮೮ |
|---|---|---|---|---|
| ರೂ. ಪೈ | ರೂ. ಪೈ | ರೂ. ಪೈ | ರೂ. ಪೈ | ರೂ. ಪೈ |
| ೧೯,೮೩,೦೮೫-೦೦ | ೨೦,೪೩,೧೫೬-೦೦ | ೧೫,೦೭,೫೩೩-೦೦ | ೨೦,೬೮,೦೦೦-೦೦ | ೬.೮೮.೨೩೫-೦೦ |

| ಆ) ೧೯೮೩-೮೪ | ೧೯೮೪-೮೫ | ೧೯೮೫-೮೬ | ೧೯೮೬-೮೭ | ೧೯೮೭-೮೮ |
|---|---|---|---|---|
| ರೂ. | ರೂ. | ರೂ. | ರೂ. | ರೂ. |
| ೧೮.೫೫,೩೬೮-೦೦ | ೧೦,೪೦,೫೬೨-೦೦ | ೫೬,೭೨,೨೮೨-೦೦ | ೩,೦೯,೨೨೮-೦೦ | ೨,೮೯,೩೪೮-೦೦ |
| ೧,೨೯,೫೬೦-೦೦ | ೯,೯೩,೭೫೬-೦೦ | ೯,೩೫,೨೬೦-೦೦ | ೧೭,೫೯,೩೨೦-೦೦ | ೩,೯೯,೦೧೨-೦೦ |

---

ಇ) ಕಾರ್ಖಾನೆಯು ನವೆಂಬರ್ ೮೮ ರಿಂದ ಕಬ್ಬು ಆರೆಯುವಿಕೆ ಪ್ರಾರಂಭಿಸಿದ್ದು ಕಾರ್ಖಾನೆ ನಡೆಸಲು ಪ್ರತಿ ದಿವಸ ಸರಾಸರಿ ರೂ. ೧೩೭೭೮ ರೂ. ಖರ್ಚು ಮಾಡಲಾಗಿದ್ದು ನವೆಂಬರ್ ೮೮ ರಿಂದ ಇಲ್ಲಿಯವರೆಗೆ ಒಟ್ಟು ರೂ. ೨೦,೬೬೮೩ ಖರ್ಚಾಗಿರುತ್ತದೆ.

ಈ) ಕಾರ್ಖಾನೆಯಲ್ಲಿ ಒಟ್ಟು ೧೨ ಸ್ವಂತ ಟ್ರಕ್ಕುಗಳು ೨ಗೂ ೮ ಡಂಪರುಗಳು ಇವೆ ಇವುಗಳಲ್ಲಿ ಡಂಪರುಗಳನ್ನು ಮೆಂಬರ್‌ರಪ್ಪಿಸ್ ಮಾತ್ ಸಾಗಿಸುವ ಸಲುವಾಗಿ ಮತ್ತು ಟ್ರಕ್ಕುಗಳನ್ನು. ಕಬ್ಬಿನ ಸಾಗಾಣಿಕೆ ಸಲುವಾಗಿ ಉಪಯೋಗಿಸಲಾಗುತ್ತಿವೆ. ನೀರನ್ನು ತರಲು ಟ್ರಕ್‌ಗಳನ್ನು ಉಪಯೋಗಿಸುತ್ತಿಲ್ಲ.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ನನ್ನ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳೇ ಬಂದಿಲ್ಲ.

ಅಧ್ಯಕ್ಷರು.—ಒಂದು ಸೆಟ್ಟು ಪ್ರಶ್ನೋತ್ತರಗಳನ್ನು ಲೈಬ್ರರಿಯಲ್ಲಿ ಇಟ್ಟಿರುತ್ತೇವೆ. ಸ್ಟಾರ್ಟ್ ಇರಲಿ, ಅನ್ ಸ್ಟಾರ್ಡ್ ಇರಲಿ ಎಷ್ಟು ಪ್ರಶ್ನೆಗಳಿಗೆ ಉತ್ತರ ಬರುತ್ತದೆ ಅಷ್ಟನ್ನೂ ಸಹ ೨೨ಳ ಜನರಿಗೆ ಕಳುಹಿಸಿ ಕೊಡಲು ನಮ್ಮ ಅಧಿಕಾರಿಗಳಿಗೆ ನಾನು ಇವತ್ತು ಹೇಳುತ್ತೇನೆ.

(ಗೊಂದಲ)